ವಿಷಯ:- ರಾಜ್ಯದ ಗಡಿ ಭಾಗಗಳಲ್ಲಿ ನಕ್ಸಲೀಯರ ಚಟುವಟಿಕೆಗಳನ್ನು ತಡೆಯಲು ಕೈಗೊಂಡಿರುವ ಕ್ರಮಗಳ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೬:- (೧೯೦)
ಶ್ರೀ ಗುರುಪಾದಪ್ಪ ನಾಗ್ಮಾರಪಳ್ಳಿ (ಬಿರಾದ)
ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಗಡಿ ಭಾಗಗಳಲ್ಲಿ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಿರುವ ನಕ್ಸಲೀಯ ಚಟುವಟಿಕೆಗಳನ್ನು ತಡೆಗಟ್ಟಲು ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ಈ ವಿಷಯದ ಬಗ್ಗೆ ರಾಜ್ಯದ ಮುಖ್ಯಮಂತ್ರಿಗಳು ಪಕ್ಕದ ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೆ ಸಮಾಲೋಚನೆಯನ್ನೇನಾದರೂ ನಡೆಸುವರೇ?

ಶ್ರೀ ಎಂ. ವೀರಪ್ಪ ಮೊಯಿಲಿ
(ಮುಖ್ಯಮಂತ್ರಿಗಳು)

೧) ನಕ್ಸಲೀಯರ ಕಾರ್ಯಾಚರಣೆ ಒಂದು ಆರ್ಥಿಕ ಸಾಮಾಜಿಕ ಸಮಸ್ಯೆಯಾಗಿದೆ ಎಂದು ಸರ್ಕಾರ ಭಾವಿಸಿದೆ. ಆರ್ಥಿಕ ಅಭಿವೃದ್ಧಿಯಿಂದ ಮುಗ್ಧ ಜನರು ನಕ್ಸಲೀಯರ ಪ್ರಭಾವದಿಂದ ಹಿಂಸಾಚಾರದಲ್ಲಿ ತೊಡಗುವುದನ್ನು ತಪ್ಪಿಸಲು ಸಾಧ್ಯ. ಆದ್ದರಿಂದ, ಗಡಿ ಪ್ರದೇಶಗಳ ಅಭಿವೃದ್ಧಿ ಯೋಜನೆಗೆ ಪ್ರಯತ್ನಿಸಲಾಗಿದೆ.

೨) ರಾಜ್ಯದ ಪೋಲೀಸರು ಉಗ್ರಗಾಮಿಗಳ ಚಲನವಲನಗಳ ಮೇಲೆ ಸದಾ ಗಮನ ಇಟ್ಟಿದ್ದಾರೆ.

೩) ಆಂಧ್ರಪ್ರದೇಶದ ಪೋಲೀಸ್ ಅಧಿಕಾರಿಗಳೊಂದಿಗೆ ಸಂಪರ್ಕ ಇಟ್ಟುಕೊಂಡು ಉಗ್ರಗಾಮಿಗಳ ಚಟುವಟಿಕೆಗಳ ಮೇಲೆ ನಿಯಂತ್ರಣ ಇರಿಸಲಾಗಿದೆ.

೪) ಉಗ್ರಗಾಮಿಗಳು ಅಡಗಿರುವ ಸ್ಥಳಗಳು ಹಾಗೂ ಅವರಿಗೆ ಶಸ್ತ್ರಾಸ್ತ್ರಗಳನ್ನು ಪೂರೈಸುವ ಸ್ಥಳಗಳ ಮೇಲೆ ಕೆಲವು ಧಾಳಿಗಳನ್ನು ನಡೆಸಿ, ಮೊಕದ್ದಮೆಗಳನ್ನು ಹೂಡಲಾಗಿದೆ ಹಾಗೂ ಕೆಲವು ಜನರನ್ನು ಬಂಧಿಸಲಾಗಿದೆ.
ಹೌದು.

ವಿಷಯ:- ಮಲೆನಾಡು ಅಭಿವೃದ್ಧಿಗೆ ಒಳಪಡುವ ಪ್ರದೇಶದ ವಿಸ್ತೀರ್ಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೭:- (೫೦೩)
ಶ್ರೀಮತಿ ಮೋಟಮ್ಮ (ಮೂಡಿಗೆರೆ)
ಪರಿಸರ ಮತ್ತು ಜೀವ ಪರಿಸರ ಶಾಸ್ತ್ರ ಹಾಗೂ ವಿಜ್ಞಾನ, ತಂತ್ರಜ್ಞಾನ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಲೆನಾಡು ಅಭಿವೃದ್ಧಿಗೆ ಒಳಪಡುವ ಪ್ರದೇಶಗಳು ಯಾವುವು ಹಾಗೂ ಅದರ ವಿಸ್ತೀರ್ಣವೆಷ್ಟು?

ಆ) ಈ ದಿಸೆಯಲ್ಲಿ ಸರ್ಕಾರದವರು ಹಮ್ಮಿ ಕೊಂಡಿರುವ ಕಾರ್ಯಕ್ರಮಗಳಾವುವು?

ಇ) ಇದುವರೆಗೂ ಯಾವ ಯಾವ ಪ್ರದೇಶವನ್ನು ಅಭಿವೃದ್ಧಿಗೊಳಿಸಲಾಗಿದೆ?

ಈ) ಹಾಲಿ ಎಷ್ಟು ಹಣವನ್ನು ನಿಗಧಿಪಡಿಸಲಾಗಿದೆ ಹಾಗೂ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ? (ಸಂಪೂರ್ಣ ವಿವರಗಳನ್ನು ಒದಗಿಸಲಾಗುವುದು)

ಶ್ರೀ ಎನ್.ಜಿ. ಹಾಲಪ್ಪ
(ಪರಿಸರ ಮತ್ತು ಜೀವ ಪರಿಸರ ಶಾಸ್ತ್ರ ಹಾಗೂ ವಿಜ್ಞಾನ, ತಂತ್ರಜ್ಞಾನ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ರಾಜ್ಯ ಮಂತ್ರಿಗಳು)

ಪಟ್ಟಿ ಲಗತ್ತಿಸಲಾಗಿದೆ.

ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ರಚನೆಯಾಗಲಿದೆ. ರಚನೆಯಾದ ನಂತರ ಮಂಡಳಿಯು ಕಾರ್ಯಕ್ರಮಗಳ ಪಟ್ಟಿಯನ್ನು ಮಾಡಲಿದೆ.

೧೯೯೧-೯೨ಕ್ಕೆ ೧೦.೦೦ ಕೋಟಿ ರೂ. ಮತ್ತು ೧೯೯೨-೯೩ಕ್ಕೆ ೩೫ ಕೋಟಿ ರೂ.ಗಳನ್ನು ನಿಗಧಿ ಪಡಿಸಲಾಗಿದೆ. ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಯಾವುದೇ ಹಣವನ್ನು ಈವರೆಗೆ ಖರ್ಚು ಮಾಡಲಾಗಿಲ್ಲ.

ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯಡಿಯಲ್ಲಿ ಬಹುವ ತಾಲ್ಲೂಕುಗಳ ಪಟ್ಟಿ

List of Taluks coming under Malnad Area Development Board

ಕ್ರಮ ಸಂಖ್ಯೆ Sl.No.	ಜಿಲ್ಲೆ District	ತಾಲ್ಲೂಕು Taluk
೧.	ಬೆಳಗಾಂ Belgaum	ಖಾನಾಪುರ, ಹುಕ್ಕೇರಿ, ಬೆಳಗಾಂ, ಬೈಲಹೊಂಗಲ, ಸೌಂದತ್ತಿ. Khanapura, Hukkeri, Belgaum, Bailahongal, Soundatti.
೨.	ಚಿಕ್ಕಮಗಳೂರು Chickmagalur	ಕೊಪ್ಪ, ಮೂಡಿಗೆರೆ, ಶೃಂಗೇರಿ, ಚಿಕ್ಕಮಗಳೂರು, ಎನ್.ಆರ್.ಪುರ, ತರೀಕೆರೆ. Koppa, Mudigere, Shringeri, Chickmagalur, N.R.Pura, Tarikere.
೩.	ಕೊಡಗು Kodagu	ಮಡಿಕೇರಿ, ಸೋಮವಾರಪೇಟೆ, ವಿರಾಜಪೇಟೆ. Mercara, Somvarpet, Virajpet.
೪.	ಹಾಸನ Hassan	ಸಕಲೇಶಪುರ, ಅಲೂರು, ಬೇಲೂರು, ಹಾಸನ, ಅರಕಲಗೂಡು. Sakaleshpura, Alur, Belur, Hassan, Arakalagud.
೫.	ಮೈಸೂರು Mysore	ಹೆಚ್.ಡಿ.ಕೋಟೆ, ಗುಂಡ್ಲುಪೇಟೆ, ಪಿರಿಯಾಪಟ್ಟಣ, ಹುಣಸೂರು, ಕೊಳ್ಳೇಗಾಲ. Heggadadevanakote, Gundelupet, Periyapattana, Hunasur, Kollegala.
೬.	ಉತ್ತರ ಕನ್ನಡ Uttara Kannada	ಅಂಕೋಲ, ಭಂಟ್ಕಳ, ಹೊನ್ನಾವರ, ಕುಮ್ಟಾ, ಕಾರವಾರ, ಸಿದ್ದಾಪುರ, ಸಿರಸಿ, ಸೂಪಾ, ಯಲ್ಲಾಪುರ, ಹಳಿಯಾಳ್, ಮುಂದಗೋಡ್. Ankola, Bhatkal, Honnavar, Kumta, Karwar, Siddapur, Sirsi, Supa, Yellapur, Haliyal, Mundgod.
೭.	ದಕ್ಷಿಣ ಕನ್ನಡ Dakshina Kannada	ಬೆಳ್ತಂಗಡಿ, ಕುಂದಾಪುರ, ಕಾರ್ಕಳ, ಪುತ್ತೂರು, ಸೂಳ್ಯ, ಉಡುಪಿ, ಮಂಗಳೂರು, ಭಂಟ್ವಾಳ್. Belthangadi, Coondapur, Karkala, Puttur, Sullya, Udipi, Mangalore, Bantwal.
೮.	ಶಿವಮೊಗ್ಗ Shimoga	ಹೊಸನಗರ, ತೀರ್ಥಹಳ್ಳಿ, ಸಾಗರ, ಶಿವಮೊಗ್ಗ, ಶಿಕಾರಿಪುರ, ಸೊರಬ, ಚನ್ನಗಿರಿ, ಭದ್ರಾವತಿ. Hosanagra, Theerthahalli, Sagar, Shimoga, Shikaripura, Soraba, Chenngagiri, Bhadravathi.
೯.	ಧಾರವಾಡ Dharwar	ಧಾರವಾಡ, ಕಲಘಟಗಿ, ಶಿಗ್ಗಾವಿ, ಸವಣೂರು, ಹಾನಗಲ್, ಬ್ಯಾಡಗಿ, ಹಿರೇಕೆರೂರು. Dharwar, Kalaghatgi, Shiggavi, Savanur, Hanagal, Byadagi, Hirekerur.